## ಮಧ್ಯಂತರ ಅರ್ಜಿ ಸಂಖ್ಯೆ III ರ ಮೇಲೆ ಆದೇಶ

ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆ: 3 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 22 ನಿಯಮ 4 ಮತ್ತು 9 ಸಹಕಲಂ.151 ಹಾಗೂ ಕಾಲ ಪರಿಮಿತಿ ಅಧಿನಿಯಮ ಕಲಂ.5 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಮೃತ 4 ನೇ ವಾರಸುದಾರರ ವಾರಸುದಾರರನ್ನು ದಾವಾದಲ್ಲಿ ಸೇರ್ಪಡೆಗೊಳಿಸಬೇಕೆಂದು, ವಾರಸುದಾರರನ್ನು ನಿಗದಿತ ಅವಧಿಯಲ್ಲಿ ಸೇರ್ಪಡೆಗೊಳಿಸದ ಕಾರಣ ದಾವೆ ಕೊನೆಗೊಂಡಿರುವ (ಅಬೆಟೆಡ್) ಆದೇಶವನ್ನು ರದ್ದು ಪಡಿಸಬೇಕೆಂದು ಹಾಗೂ ವಾರಸುದಾರರನ್ನು ದಾವಾದಲ್ಲಿ ಸೇರ್ಪಡೆಗೊಳಿಸಲು ಆಗಿರುವ ವಿಳಂಬವನ್ನು ಮನ್ನಾ ಮಾಡಬೇಕೆಂದು ಕೋರಿರುತ್ತಾರೆ.

2. ಎದುರುದಾರರ ಪರವಾಗಿ ಮತ್ತು 4 ನೇ ಎದುರುದಾರರ ವಾರಸುದಾರರು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

3. ವಾದವನ್ನು ಆಲಿಸಲಾಯಿತು. ಕಡತವನ್ನು ಪರಿಶೀಲಿಸಲಾಗಿ ಪ್ರಸ್ತುತ ದಾವೆಯನ್ನು ಅಂತಿಮ ಡಿಕ್ರಿಗಾಗಿ ಸಲ್ಲಿಸಿರುತ್ತಾರೆ. ದಾವೆಯ ವಿಚಾರಣ ಸಮಯದಲ್ಲಿ 4 ನೇ ಎದುರುದಾರರು ದಿನಾಂಕ:14.12.2019 ರಂದು ಮೃತ ಪಟ್ಟಿರುತ್ತಾರೆ. ಪ್ರಸ್ತುತ ಅರ್ಜಿಯನ್ನು ದಿನಾಂಕ 18.11.2022 ರಂದು ದಾಖಲಿಸಿರುತ್ತಾರೆ. 4 ನೇ ಎದುರುದಾರರು ಏಕಪಕ್ಷೀಯವಾಗಿದ್ದು, ವಿಚಾರಣಾ ಸಮಯದಲ್ಲಿ ಮೃತಪಟ್ಟಿರುತ್ತಾರೆ. ಏಕಪಕ್ಷೀಯವಾಗಿದ್ದರಿಂದ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 22 ನಿಯಮ 4(4) ರ ಪ್ರಕಾರ ವಾರಸುದಾರರನ್ನು ದಾವಾದಲ್ಲಿ ತರುವ ಅವಶ್ಯಕತೆ ಇರುವುದಿಲ್ಲ ಎಂದು ಇರುತ್ತದೆ. ಆ ಕಾರಣದಿಂದ ಅರ್ಜಿಯನ್ನು ನಿಗದಿತ ಅವದಿಯಲ್ಲಿ ದಾಖಲಿಸಿರುವುದಿಲ್ಲ. ಆದರೂ ತಾಂತ್ರಿಕ ದೋಷವನ್ನು ನಿವಾರಿಸಲು ವಾರಸುದಾರರನ್ನು ದಾವಾದಲ್ಲಿ ಸೇರ್ಪಡೆಗೊಳಿಸಲು ಉದ್ದೇಶಿಸಿದ್ದು ಆ ಕಾರಣದಿಂದ ವಿಳಂಬವಾಗಿರುತ್ತದೆ. ಅಸಲು ದಾವಾ ಸಂಖ್ಯೆ 23/95 ರ ಪ್ರಾಥಾಮಿಕ ಡಿಕ್ರಿಯ ಆಧಾರದ ಮೇಲೆ ಪ್ರಸ್ತುತ ದಾವೆಯನ್ನು ಅಂತಿಮ ಡಿಕ್ರಿಗಾಗಿ ಸಲ್ಲಿಸಲಾಗಿರುತ್ತದೆ. ಪ್ರತಿವಾದಿಯರು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

4. ಮೃತ 4 ನೇ ಪ್ರತಿವಾದಿಯ ವಾರಸುದಾರು ಪ್ರಸ್ತುತ ದಾವೆಗೆ ಅವಶ್ಯಕ ಪಕ್ಷಕಾರರು ಆಗಿರುತ್ತಾರೆ. ಪ್ರಸ್ತುತ ದಾವೆಯು 2018 ರಿಂದ ಬಾಕಿ ಇರುತ್ತದೆ. ಅರ್ಜಿಯನ್ನು ತಿರಸ್ಕರಿಸಿದಲ್ಲಿ

ಮತ್ತಷ್ಟು ವಿಳಂಬವಾಗುವ ಸಾಧತೆ ಇರುತ್ತದೆ. ಇದರಿಂದ ಉಭಯತರಿಗೂ ತೊಂದರೆ ಆಗುವ ಸಾಧ್ಯತೆ ಇರುತ್ತದೆ. ನ್ಯಾಯದ ಹಿತ ದೃಷ್ಟಿಯಿಂದ ಪ್ರಸ್ತುತ ಅರ್ಜಿಯನ್ನು ಪರಿಗಣಿಸಬಹುದಾಗಿರುತ್ತದೆ. ನ್ಯಾಯ ವಿಫಲವಾಗುವುದನ್ನು ತಪ್ಪಿಸಲು ಮತ್ತು ಪಕ್ಷಕಾರರಿಗೆ ಸೂಕ್ತ ನ್ಯಾಯ ದೊರಕಿಸಿ ಕೊಡಲು ಕಾಲ ವಿಳಂಬವನ್ನು ಮನ್ನಾ ಮಾಡಿ, ಅರ್ಜಿಯನ್ನು ಪುರಸ್ಕರಿಸುವುದು ನ್ಯಾಯದ ಹಿತ ದೃಷ್ಟಿಯಿಂದ ಸೂಕ್ತವೆಂದು ಕಂಡು ಬರುತ್ತದೆ. ಅರ್ಜಿಯನ್ನು ನಿರಾಕರಿಸಲು ಇತರ ಬಲವಾದ ಕಾರಣ ಅಥವಾ ತಕರಾರು ಇರುವುದಿಲ್ಲ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸುವುದು ಸೂಕ್ತವೆಂದು ನಿರ್ಣಯಿಸಿ ಈ ಕೆಳಕಂಡತೆಃ

**:ಆದೇಶ:**

ಅರ್ಜಿದಾರರು/ವಾದಿಯರು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆಃ 3 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 22 ನಿಯಮ 4, 9 ಸಹಕಲಂ.151 ಕಾಲ ಪರಿಮಿತಿ ಅದಿನಿಯಮ ಕಲಂ.5 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ ಆದೇಶಿಸಿದೆ.

4 ನೇ ಎದುರುದಾರರ ವಾರಸುದಾರರನ್ನು ದಾವೆಯಲ್ಲಿ ತರಲು ಆಗಿರುವ ಕಾಲ ವಿಳಂಬವನ್ನು ಮಾನ್ನಾ ಮಾಡಿ, ಊಹಾತ್ಮಕವಾಗಿ ದಾವೆ ಕೊನೆಗೂಂಡಿರುವ ಆದೇಶವನ್ನು ರದ್ದು ಪಡಿಸಿ, 4 ನೇ ಎದುರುದಾರರ ವಾರಸುದಾರರನ್ನು ದಾವಾದಲ್ಲಿ ಎದುರುದಾರ 4-ಎ ಯಿಂದ 4-ಸಿ ಎಂದು ಸೇರ್ಪಡೆಗೊಳಿಸಲು ಅನುಮತಿ ನೀಡಿ ಆದೇಶಿಸಿದೆ.

ವಾದಪತ್ರದ ಶಿರೋನಾಮೆಯಲ್ಲಿ ತಿದ್ದುಪಡಿ ಮಾಡಿ, ತಿದ್ದುಪಡಿ ಮಾಡಿದ ವಾದ ಪತ್ರವನ್ನು ಸಲ್ಲಿಸಲು ದಿನಾಂಕಃ16.11.2023 ರಂದು ಕರೆಯುವುದು.

**(ಪ್ರಕಾಶ್ ವಿ.)**
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**